**ಅಸಲು ದಾವಾ ನಂಃ23 /2022**
**ಡಿ.ಡಬ್ಲ್ಯೂಃ 2 ,**

**ದಿನಾಂಕ :15-10-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟಿ ಸವಾಲು :- ಶ್ರೀ . ಎಸ್.ಎಸ್.ಜಿ. ವಾದಿ ಪರ ವಕೀಲರಿಂದ :**

1ನೇ ಪ್ರತಿವಾದಿ ದೊಡ್ಡಪ್ಪನ ಮಗಳು. 1ನೇ ಪ್ರತಿವಾದಿಯ ಮಗಳನ್ನು ಮದುವೆ ಮಾಡಿಕೊಂಡಿದ್ದೇನೆ ಎಂದರೆ ಸರಿ. 1ನೇ ಪ್ರತಿವಾದಿಗೆ ಮೂರು ಜನ ಅಕ್ಕ ತಂಗಿಯರು, ಮಲ್ಲಮ್ಮ, ಶರಣಮ್ಮ ಮತ್ತು 1ನೇ ಪ್ರತಿವಾದಿ. ಮಲ್ಲಪ್ಪನಿಗೆ ವಾದಿ ಮೊದಲನೇ ಹೆಂಡತಿ ಎಂದರೆ ಸರಿ. 1ನೇ ಪ್ರತಿವಾದಿ ಮಲ್ಲಪ್ಪನಿಗೆ ಎರಡನೇ ಹಂಡತಿ ಎಂದರೆ ಸರಿ. ನಾನು ಶಾಲೆ ಕಲಿತಿಲ್ಲಾ. ನನಗೆ 45 ವರ್ಷ ವಯಸ್ಸು. ವಯಸ್ಸಿನ ದಾಖಲೆ ಸಲ್ಲಿಸಿಲ್ಲಾ. ದಾವಾ ಆಸ್ತಿ ಮಲ್ಲಮ್ಮ, ಮಹಾದೇವಮ್ಮ, ಶರಣಮ್ಮ ಇವರ ತಂದೆ ಆಸ್ತಿ ಎಂದರೆ ಸಾಕ್ಷಿ ತಾಯಿ ಆಸ್ತಿ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳು ಚಂದಪ್ಪ ಹೆಸರಿನಲ್ಲಿ ಇದ್ದವು ಎಂದರೆ ಸರಿ. ನನ್ನ ಸಾಕ್ಷಿ ಪ್ರಮಾಣ ಪತ್ರದಲ್ಲಿ ಬರೆದ ಸಂಗತಿ ಗೊತ್ತಿಲ್ಲಾ. ದೇವಿಂದ್ರಪ್ಪ ಇವರು ಮಲ್ಲಮ್ಮ, ಮಹಾದೇವಮ್ಮ, ಶರಣಮ್ಮ ಕ್ಕಿಂತ ದೊಡ್ಡವರು. ಆತನಿಗೆ ಮದುವೆ ಆಗಿಲ್ಲಾ ಎಂದರೆ ಸರಿ. ಆತ ತೀರಿ ಹೋಗಿ 30 ವರ್ಷಗಳು ಆಗಿವೆ. ಆತ ಸಾಯುವಾಗ 20 ವರ್ಷ ಇದ್ದವು. ಆತ ಒಕ್ಕಲುತನ ಮಾಡುತ್ತಿದ್ದ. ಆತ ಒಕ್ಕಲುತನದಿಂದ ಅವರ ತಂದೆಯ ಆಸ್ತಿಗಳು ನೋಡುತ್ತಿದ್ದ ಎಂದರೆ ಸರಿ. ಆತ ಒಕ್ಕಲುತನ ಬಿಟ್ಟು ಬೇರೆ ಕೆಲಸ ಮಾಡುತ್ತಿರಲಿಲ್ಲಾ ಎಂದರೆ ಸರಿ. ದೇವಿಂದ್ರಪ್ಪ ಸಾಯುವಾಗ ನನಗೆ 10 ವರ್ಷಗಳು ಇದ್ದವು. ದೇವಿಂದ್ರಪ್ಪ ಆಸ್ತಿಗಳನ್ನು ಖರಿದಿಸಿದ ಖರಿದಿ ಪತ್ರಗಳನ್ನು ನೋಡಿಲ್ಲಾ ಜನರು ಹೇಳಿರುತ್ತಾರೆ. ಸಾಕ್ಷಿ ಮುಂದುವರೆದು

**ಅಸಲು ದಾವಾ ನಂಃ23 /2022**
**ಡಿ.ಡಬ್ಲ್ಯೂಃ 2 ,**

ನನ್ನ ತಂದೆ ಹೇಳಿರುತ್ತಾರೆ ಎಂದು ನುಡಿಯುತ್ತಾರೆ. ಖರಿದಿ ಯಾವ ವರ್ಷದಲ್ಲಿ ಮಾಡಿದ್ದಾನೆ ಎಂದು ಗೊತ್ತಿಲ್ಲಾ. ದೇವಿಂದ್ರಪ್ಪ ಸಾಯುವಕ್ಕಿಂತ ಮುಂಚೆ 6 ತಿಂಗಳ ತನಕ ಆರೋಗ್ಯ ಸರಿ ಇರಲಿಲ್ಲಾ. ದೇವಿಂದ್ರಪ್ಪ ಮನೆಯ ಹಿರಿಮಗ ಇದ್ದ ಕಾರಣ ಅವರ ತಂದೆ ಆತನ ಹೆಸರಿಗೆ ದಾವಾ ಆಸ್ತಿಗಳು ಮಾಡಿದ್ದಾರೆ ಎಂದರೆ ಸಾಕ್ಷಿ ಆತ ಸ್ವಂತ ಗಳಿಸಿದ್ದಾರೆ ಎಂದು ನುಡಿಯುತ್ತಾರೆ. ದೇವಿಂದ್ರಪ್ಪ ದಾವಾ ಆಸ್ತಿಗಳು ಸ್ವಂತ ಗಳಿಸಿದ್ದಾನೆ ಎಂದು ದಾಖಲೆ ನೋಡಿಲ್ಲಾ, ಜನರು ಹೇಳುತ್ತಾರೆ ಎಂದು ನುಡಿಯತ್ತಾರೆ. ದೇವಿಂದ್ರಪ್ಪ ತೀರಿಕೊಳ್ಳುವ ಸಮಯದಲ್ಲಿ ಆತನ ತಂದೆ ತಾಯಿ ಇದ್ದರು. ದೇವಿಂದ್ರಪ್ಪ ತೀರಿಕೊಳ್ಳುವ ಸಮಯದಲ್ಲಿ ಮದುವೆ ಆಗಿರಲಿಲ್ಲಾ. 1ನೇ ಪ್ರತಿವಾದಿ 4 ದಾನ ಪತ್ರಗಳನ್ನು ಪ್ರತಿವಾದಿ ನಂ-3 ಮತ್ತು 4 ಇವರಿಗೆ ಮಾಡಿದ ದಾನ ಪತ್ರಗಳಿಗೆ ನಾನೇ ಸಾಕ್ಷಿ ಇದ್ದೇನೆ ಎಂದರೆ ಸರಿ. ದಾನ ಪತ್ರದ ಜೊತೆಗೆ ಇದ್ದ ಆಧಾರ ಕಾರ್ಡ ರಾಮಣ್ಣ ತಂದೆ ಮಲ್ಲಪ್ಪ ತಳವಾರ ನಾನೇ ಎಂದರೆ ಸರಿ. ಅದರಲ್ಲಿ ನನ್ನ ಜನ್ಮ ದಿನಾಂಕ: 01-01-1979 ರಂದು ಬರೆದಿದೆ ಎಂದರೆ ಸರಿ. ದಾವಾ ಆಸ್ತಿಗಳು ಮೂರು ಜನ ಹೆಣ್ಣು ಮಕ್ಕಳಿಗೆ ಸಂಬಂಧಿಸಿದೆ ಎಂದರೆ ಸರಿಯಲ್ಲ . 1ನೇ ಪ್ರತಿವಾದಿ ದಾವಾ ಆಸ್ತಿಗಳನ್ನು ಖರಿದಿ ಮಾಡಿಲ್ಲಾ, ಅವರ ತಂದೆ ತಾಯಿ ಮತ್ತು ಅಣ್ಣನಿಂದ ಬಂದಿದೆ ಎಂದು ನುಡಿಯುತ್ತಾರೆ. ವಾದಿ ನನಗೆ ಅತ್ತೆ ಆಗಬೇಕು. ದಾವಾ ಜಮೀನುಗಳನ್ನು ಹೊರಗಡೆ ಹೋಗಬಾರದೆಂದು 1ನೇ ಪ್ರತಿವಾದಿ ವಾದಿಯ ಗಂಡನೊಂದಿಗೆ ಎರಡನೇ ಮದುವೆ ಮಾಡಿಕೊಂಡರು ಎಂದರೆ ಸರಿಯಲ್ಲ. 1ನೇ ಪ್ರತಿವಾದಿ, 3 ಮತ್ತು 4ನೇ ಪ್ರತಿವಾದಿ ಮಾಡಿಕೊಟ್ಟ ದಾನ ಪತ್ರಗಳನ್ನು ವಾದಿ ಮೇಲೆ ಬಂಧನಕಾರಕ ಅಲ್ಲಾ ಮತ್ತು ಆ ಸಮಯದಲ್ಲಿ ಅವಳಿಗೆ ಯಾವುದೇ ಮಾಹಿತಿ ನೀಡಿಲ್ಲಾ

ಎಂದರೆ ಸರಿಯಲ್ಲ. ದೇವಿಂದ್ರಪ್ಪ ಸ್ವಂತ ಗಳಿಸಿದ ಆಸ್ತಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ದಾವಾ ಆಸ್ತಿಗಳನ್ನು ಗಳಿಸುವ ಸಮಯದಲ್ಲಿ ದೇವಿಂದ್ರಪ್ಪ ಯಾವುದೇ ಸ್ವಂತ ಆಧಾಯ ಇರಲಿಲ್ಲಾ ಎಂದರೆ ಸರಿಯಲ್ಲ . ದಾವಾ ಆಸ್ತಿಗಳನ್ನು ದೇವಿಂದ್ರಪ್ಪ ಆತನ ತಂದೆ ತಾಯಿ ಆತನ ಹೆಸರಿಗೆ ಮಾಡಿದ ನಂತರ ಆತ ತೀರಿ ಹೋದ ಎಂದರೆ ಸರಿ. ಸರ್ವೆ ನಂಬರ : 591, 594 ಚಂದಪ್ಪ ಮತ್ತು ಮೊಗಲಮ್ಮ ಇವರ ಹೆಸರ ಮೇಲೆ ಇದ್ದವು ಎಂದರೆ ಸರಿ. ಸರ್ವೆ ನಂಬರ : 591, 594 ದೇವಿಂದ್ರಪ್ಪ ಸ್ವಂತ ಗಳಿಸಿದ ಆಸ್ತಿ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ದೇವಿಂದ್ರಪ್ಪ ಸಾಯುವ ಕಾಲಕ್ಕೆ ನನಗೆ 10 ವರ್ಷ ಇದ್ದ ಕಾರಣ ನನಗೆ ಯಾವುದೇ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ . 1ನೇ ಪ್ರತಿವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ . ದಾವಾ ಆಸ್ತಿಗಳು 1ನೇ ಪ್ರತಿವಾದಿ ಖರಿದಿ ಮಾಡಿಲ್ಲಾ, ಹಿರಿಯರ ಆಸ್ತಿ ಇದ್ದ ಕಾರಣ ಅವರ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಎಲ್ಲಾ ಆಸ್ತಿಗಳನ್ನು 1ನೇ ಪ್ರತಿವಾದಿ ನೋಡಿಕೊಳ್ಳುತ್ತಿದ್ದಳು ಎಂದರೆ ಸರಿ. 1ನೇ ಪ್ರತಿವಾದಿ ಬುದ್ದಿವಂತ ಇದ್ದಕಾರಣ ಮತ್ತು ಮನೆಯನ್ನು ದೇಕಿರೇಖಿ ಮಾಡುತ್ತಿದ್ದು ಎಲ್ಲಾ ಆಸ್ತಿಗಳನ್ನು ತನ್ನ ಹೆಸರಿಗೆ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ . ವಾದಿ ಪ್ರತಿವಾದಿಗೆ ಪಾಲು ಕೇಳಿದ್ದಾಳೆ ಎಂದರೆ ಸರಿಯಲ್ಲ . 1ನೇ ಪ್ರತಿವಾದಿ ತನ್ನ ಹೆಸರಿಗೆ ದಾವಾ ಜಮೀನಗಳನ್ನು ಮಾಡಿಕೊಂಡ ವಿಷಯ ವಾದಿಗೆ ಗೊತ್ತಿಲ್ಲಾ ಎಂದರೆ ಸರಿಯಲ್ಲ. ಈ ದಾವೆ ಸಲ್ಲಿಸುವ ಮುಂಚೆ ವಾದಿ ಪ್ರತಿವಾದಿ ಹತ್ತಿರ ಪಾಲು ಕೇಳಿದ್ದು, ಅವಳು ನಿರಕಾರಣೆ ಮಾಡಿದ

**ಅಸಲು ದಾವಾ ನಂಃ23 /2022**
**ಡಿ.ಡಬ್ಲ್ಯೂಃ 2 ,**

ಕಾರಣ ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ . ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ .

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

**ಓ.ಹೇ.ಕೇ.ಸರಿ.ಇದೆ.**

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಚಿತ್ತಾಪೂರ.**